RVCE STUDENT GOT 25TH RANK IN UPSC

...vani 13.06.2014

▶ ಪರೀಕ್ಷೆಯಲ್ಲಿ 25ನೇ ರ್‍ಯಾಂಕ್ ▶ ಇಂಗ್ಲಿಷ್‌ನಲ್ಲಿ ಬರೆದಾಗ 2 ಬಾರಿಯೂ ಫೇಲ್

# ಕನ್ನಡ ಐಎಎಸ್: ಗುರುದತ್ತ ರಾಜ್ಯಕ್ಕೆ ಪ್ರಥಮ

**ಧಾರವಾಡ:** ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ 2013ನೇ ಸಾಲಿನ ಐಎಎಸ್‌ನಲ್ಲಿ ಕನ್ನಡದಲ್ಲಿ ಪರೀಕ್ಷೆ ಬರೆದ ಗುರುದತ್ತ ನಾರಾಯಣ ಹೆಗಡೆ 25ನೇ ರ್‍ಯಾಂಕ್ ಪಡೆದು ರಾಜ್ಯಕ್ಕೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ.



ಗುರುದತ್ತ (26), ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕಿನ ಕರ್ಜಿಮನೆಯವರು. ತಂದೆ ನಾರಾಯಣ ಹೆಗಡೆ ವ್ಯಾಪಾರಸ್ಥರು. ತಾಯಿ ಶಶಿಕಲಾ ಹೆಗಡೆ ಧಾರವಾಡದ ಕೆ.ಇ. ಬೋರ್ಡ್ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. 1ನೇ ತರಗತಿಯಿಂದ ಎಸ್ಎಸ್ಎಲ್‌ಸಿವರೆಗೂ ಧಾರವಾಡದ ಕೆ.ಇ. ಬೋರ್ಡ್ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲೇ ಕಲಿತ ಇವರು, ನಂತರ ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ವಿಜ್ಞಾನ ವಿಭಾಗದಲ್ಲಿ ಪಿಯುಸಿ, ಬೆಂಗಳೂರಿನ ಆರ್.ವಿ.ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ. ಪದವಿ ಪಡೆದಿದ್ದಾರೆ. ಇಂಗ್ಲಿಷ್, ಗಣಿತ ಮತ್ತು ವಿಜ್ಞಾನ ವಿಷಯದಲ್ಲಿ ಆರಂಭದಿಂದಲೂ ಚುರುಕಾಗಿದ್ದು, ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಶೇ.98ರಷ್ಟು ಅಂಕ ಗಳಿಸಿದ್ದಾರೆ.

■ **ಕನ್ನಡದಲ್ಲಿ ಬರೆದಾಗ ಪಾಸಾದರು:** ಈ ಹಿಂದೆ ಇವರು ಎರಡು ಬಾರಿ ಇಂಗ್ಲಿಷ್‌ನಲ್ಲಿ ಐಎಎಸ್ ಪರೀಕ್ಷೆ ಬರೆದಿದ್ದರು. ಹಿಂದಿನ ಎರಡು ಪ್ರಯತ್ನಗಳಲ್ಲಿಯೂ ಸಂದರ್ಶನದ ಹಂತ ತಲುಪಿ ವಾಪಸು ಬಂದಿದ್ದರು. ಆದರೆ, ಉತ್ತೀರ್ಣರಾಗಿರಲಿಲ್ಲ. ಮೂರನೇ ಬಾರಿಗೆ ಕನ್ನಡದಲ್ಲೇ ಪರೀಕ್ಷೆ ಬರೆಯಬೇಕು ಎನ್ನುವ ಛಲ ಮೂಡಿ, ಕನ್ನಡದಲ್ಲೇ ಪರೀಕ್ಷೆ ಬರೆದರು.

▶ 11ನೇ ಪುಟಕ್ಕೆ

## ಕರ್ನಾಟಕದ 45 ಮಂದಿ ಪಾಸ್

**ಬೆಂಗಳೂರು:** ಯುಪಿಎಸ್ಸಿ ಪರೀಕ್ಷೆಯಲ್ಲಿ ಈ ವರ್ಷ ಕರ್ನಾಟಕದಿಂದ ಸುಮಾರು 45 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ. ಐಜಿಯಾಗಿದ್ದ ಗೋಪಾಲ್ ಹೊಸೂರ್ ಅವರ ಪುತ್ರ ಶ್ರೇಯಸ್ ಹೊಸೂರ್ 430ನೇ ರ್‍ಯಾಂಕ್ ಪಡೆದಿದ್ದಾರೆ. ದೇಶಾದ್ಯಂತ ಸುಮಾರು 3.5 ಲಕ್ಷ ಮಂದಿ ಪರೀಕ್ಷೆ ಬರೆದಿದ್ದರು.

## ಜೈಪುರದ ಗೌರವ್ ದೇಶಕ್ಕೇ ಪ್ರಥಮ

**ನವದೆಹಲಿ:** ಯುಪಿಎಸ್‌ಸಿ ನಡೆಸಿದ 2013ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಗಳ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು, ಜೈಪುರದ ಗೌರವ್ ಅಗರ್‌ವಾಲ್ ಅವರು ಮೊದಲ ರ್‍ಯಾಂಕ್ ಪಡೆದಿದ್ದಾರೆ. ಇದರಿಂದಾಗಿ 4 ವರ್ಷಗಳ ಬಳಿಕ ಪುರುಷ ಅಭ್ಯರ್ಥಿಯೊಬ್ಬರಿಗೆ ಒಂದನೇ ರ್‍ಯಾಂಕ್ ಲಭಿಸಿದಂತಾಗಿದೆ.

ದೆಹಲಿ ಮೂಲದ ಮುನೀಶ್ ಶರ್ಮಾ 2, ರಚಿತ್ ರಾಜ್ ಮೂರನೇ ರ್‍ಯಾಂಕ್ ಪಡೆದಿದ್ದಾರೆ. ಒಟ್ಟಾರೆ 1122 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ.

▶ ವಿವರ: 6